# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–9251/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 05/09/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: CLZ ಸನ್ನದನ್ನು ಸ್ಥಳಾಂತರಿಸಿ ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂ. 392, 392/1 ರಲ್ಲಿ ಶ್ರೀ ಅಜಿತ್ ಚೌಟಾಲ ಇವರಿಗೆ ವೈನ್ ಷಾಪ್ ನಡೆಸಲು ನಿಯಮಬಾಹಿರವಾಗಿ ಅನುಮತಿ ನೀಡಿದ್ದು ಉದ್ದೇಶಿತ ಸ್ಥಳಾಂತರವು ಆಕ್ಷೇಪಣಾ ಸ್ಥಳದಿಂದ ಮುಕ್ತವಾಗಿರದೆ ಸಾರ್ವಜನಿಕ ಭಜನಾ ಮಂದಿರವು ಹತ್ತಿರದಲ್ಲಿದ್ದು ಸದರಿ ಕಟ್ಟಡದಿಂದ CLZ ಸನ್ನದನ್ನು ನಿಯಮಾನುಸಾರ ಸ್ಥಳಾಂತರಿಸಲು ಅಗತ್ಯ ಕ್ರಮ ಜರುಗಿಸುವುದರ ಕುರಿತು ವರದಿ.

*****

ಶ್ರೀ ರಮೇಶ್ ಶೇಠ್, 495/2 ಮಿಷನ್ ಸ್ಕೂಲ್ ರಸ್ತೆ, ಸಿ.ಎಸ್.ಐ. ಚರ್ಚ್ ಹತ್ತಿರ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಸಲ್ಲಿಸಿ, (1) ಶ್ರೀ ಗೋಪಾಲ ಕೃಷ್ಣ, ಮುಖ್ಯಾಧಿಕಾರಿ, ಪುರಸಭೆ, ಟಿ.ಎಂ.ಸಿ. ಬಿಲ್ಡಿಂಗ್, 2ನೇ ಹಂತ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (2) ಶ್ರೀ ಅರುಣ್ ಪ್ರಭಾ, ಯೋಜನಾ ನಿದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಣಿಪಾಲ, ಉಡುಪಿ ಜಿಲ್ಲೆ ಇವರ ವಿರುದ್ಧ ತನಿಖೆ ಕೈಗೊಳ್ಳಲು ಕೋರಿರುತ್ತಾರೆ.( ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಾರಾಂಶ:–

ಶ್ರೀ ಅಜಿತ್ ಚೌಟಾ ಎಂಬುವವರು ಕುಂದಾಪುರ ಪುರಸಭೆಯ ವ್ಯಾಪ್ತಿಯ ವಾರ್ಡ್ ನಂ. 2ರ 392, 392/1ರ ಕಟ್ಟಡದಲ್ಲಿ ವೈನ್ ಮಾರಾಟದ ಅಂಗಡಿಯನ್ನು ಪ್ರಾರಂಭಿಸಲು ಪುರಸಭೆಯಿಂದ ನಿರಾಕ್ಷೇಪಣಾ ಪತ್ರವನ್ನು ಕೋರಿದ್ದು, ಅದಕ್ಕೆ ಆಕ್ಷೇಪಣೆ ಸಲ್ಲಿಸಿದ್ದರೂ ನಿಯಮಬಾಹಿರವಾಗಿ ಎದುರುದಾರರು ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆಂದು ದೂರು ಸಲ್ಲಿಸಿರುತ್ತಾರೆ.

3. ಕುಂದಾಪುರ ಪುರಸಭೆ ವ್ಯಾಪ್ತಿಯ ಸರ್ವೆ ನಂ. 69/2ಎ, 869/1ರ ಜಾಗದಲ್ಲಿ ವೈನ್ ಶಾಪ್ ನಡೆಸಲು ನೀಡಿದ ಎನ್.ಓ.ಸಿ., ಕಾನೂನು ಬಾಹಿರವಾಗಿದ್ದು ಕಟ್ಟಡದ ಸುತ್ತ ವಾಸೋಪಯೋಗಿ ಕಟ್ಟಡಗಳು ಇದ್ದು ಕಟ್ಟಡದ ಹತ್ತಿರ South India Church ಇರುವುದನ್ನು ಪರಿಗಣಿಸದೆ ನಿಯಮಬಾಹಿರವಾಗಿ ಎನ್.ಓ.ಸಿ., ನೀಡಿರುತ್ತಾರೆ. ಗೀತಾಂಜಲಿ ಟಾಕೀಸಿನ ಆವರಣದಲ್ಲಿ ವೈನ್ ಶಾಪ್ ನಡೆಸಲು ಪರವಾನಿಗೆ ನೀಡುವ ವಿಚಾರದಲ್ಲಿ ನೀಡಿದ ಎನ್.ಓ.ಸಿ., ಆದೇಶವನ್ನು ವಜಾ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಸಬೇಕೆಂದು ಹಾಗೂ ಹೊಸದಾಗಿ ಸ್ಥಳ ತನಿಖೆ ಮಾಡಿ, ತಕರಾರನ್ನು ಸರಿಯಾಗಿ ಪರಿಗಣಿಸಿ speaking ಆದೇಶ ಮಾಡಲು 1ನೇ ಎದುರುದಾರರಿಗೆ ಆದೇಶಿಸಲು ಕೋರಿ ದೂರು ಸಲ್ಲಿಸಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆಗಳು:–

ಪುರಸಭಾ ಕಛೇರಿಯಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸುವ ಸಲುವಾಗಿ ಪುರಸಭಾ ವತಿಯಿಂದ ಸ್ಥಳ ತನಿಖೆಯನ್ನು ದಿನಾಂಕ: 09/06/2017 ರಂದು ಅಪರಾಹ್ನ 3:00 ಗಂಟೆಗೆ ನಿಗದಿಪಡಿಸಿ, ಈ ಪಿರ್ಯಾದುದಾರರಿಗೆ ಸೂಚನಾ ಪತ್ರವನ್ನು ಜಾರಿ

ಮಾಡಲಾಗಿದೆ. ಪಿರ್ಯಾದುದಾರರು ತನ್ನ ಪಿರ್ಯಾದಿನಲ್ಲಿ ಉಲ್ಲೇಖಿಸಿದಂತೆ, (1) ಸಾಯಿ ಮಂದಿರ, (2) ರಾಘವೇಂದ್ರ ಮಂದಿರ, (3) ನಾಗ ಸ್ಥಾನ ಮತ್ತು (4) ಚರ್ಚ್ ಆಫ್ ಸೌತ್ ಇಂಡಿಯಾ–ಈ ನಾಲ್ಕು ನಿವೇಶನಗಳಿಗೆ ಉದ್ದೇಶಿತ ವೈನ್‌ಶಾಪ್ ನಿಂದ ವಾಸ್ತವಿಕವಾಗಿ ಇರುವ ದೂರವೆಷ್ಟೆಂಬುದನ್ನು ಅರಿಯುವುದಷ್ಟೇ ಸ್ಥಳ ತನಿಖೆಯ ಉದ್ದೇಶವಾಗಿತ್ತು. ಸ್ಥಳ ತನಿಖೆಯನ್ನು ನಿಗದಿತ ದಿನ ಮತ್ತು ಸಮಯದಲ್ಲಿ ನಡೆಸಲಾಗಿದೆ. ಸ್ಥಳ ತನಿಖೆಯನ್ನು ಕಾನೂನಿನ ಪ್ರಕಾರ ನಡೆಸಿ, ಅರ್ಜಿದಾರರಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ. ವೈನ್‌ಶಾಪ್ ತೆರೆಯಲು ಉದ್ದೇಶಿಸಿದ ಸ್ಥಳವು ನಿಷೇಧಿತ ದೂರಕ್ಕಿಂತ ಹೆಚ್ಚಿನ ದೂರದಲ್ಲಿರುವುದನ್ನು ಸ್ಥಳ ತನಿಖೆಯ ಸಮಯದಲ್ಲಿ ವಸ್ತುಸ್ಥಿತಿಯಂತೆ ಕಂಡುಹಿಡಿದು, ಕಂದಾಯ ನಿರೀಕ್ಷಕರು ಸಲ್ಲಿಸಿದ ವರದಿಯ ಮಾಹಿತಿಯ ಆಧಾರದಲ್ಲಿ ಅರ್ಜಿದಾರರಿಗೆ ನಿರಾಕ್ಷೇಪಣಾ ಪತ್ರ ನೀಡಿದೆ. ಅಬಕಾರಿ ಇನ್ಸ್‌ಪೆಕ್ಟರ್ ರವರು ದಿನಾಂಕ: 29/06/2017 ರಂದು ನೀಡಿದ ಹಿಂಬರಹದಲ್ಲಿ, ''ಉದ್ದೇಶಿತ ಸ್ಥಳಾಂತರ ಕಟ್ಟಡವು ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು) ನಿಯಮ 5ರ ಪ್ರಕಾರ ಆಕ್ಷೇಪಣಾ ಸ್ಥಳದಿಂದ ಮುಕ್ತವಾಗಿರುತ್ತದೆ'' ಎಂಬುದಾಗಿ ಮಾಹಿತಿಯನ್ನು ನೀಡಿರುತ್ತಾರೆ. ಪುರಸಭೆಯ ಮುಖ್ಯಾಧಿಕಾರಿಯವರ ಕ್ರಮದ ವಿರುದ್ಧ ಚುನಾಯಿತ ಪುರಸಭೆಗೆ ಮೇಲ್ಮನವಿ ಸಲ್ಲಿಸಲು 1967ರ ಕರ್ನಾಟಕ ಪುರಸಭೆಗಳ ಮೇಲ್ಮನವಿ ಮತ್ತು ರಿವಿಜನ್ ನಿಯಮಗಳಲ್ಲಿ ಆಸ್ಪದವಿರುತ್ತದೆ. ಪುರಸಭೆಯ ವತಿಯಿಂದ ನೀಡಿದ ''ನಿರಾಕ್ಷೇಪಣಾ'' ಪತ್ರವು ಕಾನೂನು ಸಮ್ಮತವಾಗಿಲ್ಲವೆಂಬುದಾಗಿ ಪಿರ್ಯಾದುದಾರರು ನಿರ್ಧರಿಸಿದಲ್ಲಿ, 1967ರ ಮೇಲ್ಮನವಿ ಅಥವಾ ರಿವಿಜನ್ ನಿಯಮಗಳಡಿಯಲ್ಲಿ ಸೂಕ್ತ ಸಾಕ್ಷ್ಯಾಧಾರಗಳ ಸಹಿತ ಮೇಲ್ಮನವಿಯನ್ನು ಸಲ್ಲಿಸಲು ಆಸ್ಪದವಿರುತ್ತದೆ. ಇದೇ ರೀತಿ 1965ರ ಕರ್ನಾಟಕ ಅಬಕಾರಿ ಅಧಿನಿಯಮದಲ್ಲಿಯೂ ಮೇಲ್ಮನವಿ ಸಲ್ಲಿಸಲು ಆಸ್ಪದವಿರುತ್ತದೆ. ಅಬಕಾರಿ ಇಲಾಖೆಯು ಸನ್ನದುಗಳನ್ನು ಸ್ಥಳಾಂತರ ಮಾಡುವಾಗ ಸ್ಥಳೀಯ ಸಂಸ್ಥೆಗಳ ಎನ್.ಓ.ಸಿ., ಪಡೆಯುವ ಅವಶ್ಯಕತೆಯಿರುವುದಿಲ್ಲ. ಈ ಬಗ್ಗೆ ಅವರು ನೀಡಿದ ಸ್ಪಷ್ಟೀಕರಣವನ್ನು ದಯಮಾಡಿ ಗಮನಿಸಬೇಕೆಂಬುದಾಗಿ ನಮೂದಿಸಿರುತ್ತಾರೆ.

5. 2ನೇ ಎದುರುದಾರರ ಆಕ್ಷೇಪಣೆಗಳು:

ಪ್ರಸ್ತುತ ವಿಷಯದಲ್ಲಿ ನನ್ನದೇನು ಪಾತ್ರ ಇರುವುದಿಲ್ಲ. ಶ್ರೀ ರಮೇಶ್ ಶೇಟ್ ಇವರು ಜಿಲ್ಲಾಧಿಕಾರಿಯವರಿಗೆ ಬರೆದ ದೂರಿನ ಮೇರೆಗೆ ನಾನು ಮುಖ್ಯಾಧಿಕಾರಿಯವರಲ್ಲಿ ವರದಿ ಕೇಳಿರುತ್ತೇನೆ. ದೂರುದಾರರು ನನ್ನ ಬಗ್ಗೆ ಯಾವ ಉದ್ದೇಶದಿಂದ ದೂರು ನೀಡಿರುತ್ತಾರೆ ಎಂದು ತಿಳಿಯುತ್ತಿಲ್ಲ. ಜಿಲ್ಲಾಧಿಕಾರಿಯವರಿಗೆ ಬಂದ ದೂರಿನ ಮೇರೆಗೆ ಕ್ರಮ ತೆಗೆದುಕೊಳ್ಳಲು ಕುಂದಾಪುರ ಮುಖ್ಯಾಧಿಕಾರಿಯವರಿಗೆ ನಿರ್ದೇಶನ ನೀಡಿರುತ್ತೇನೆ ಹೊರತು ನನ್ನ ಯಾವುದೇ ಪಾತ್ರ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ.

6. ಅಬಕಾರಿ ಉಪ ಆಯುಕ್ತರು, ಉಡುಪಿ ರವರು ಸಲ್ಲಿಸಿದ ತನಿಖಾ ವರದಿ:

ಶ್ರೀ ಅಜಿತ್ ಚೌಟಾ ಬಿ. ಇವರು 2016–17ನೇ ಸಾಲಿನಲ್ಲಿ ಹೊಂದಿದ್ದ ಸಿಎಲ್–2 ಸನ್ನದು ರಾಷ್ಟ್ರೀಯ ಹೆದ್ದಾರಿ–66 ರಿಂದ 137 ಮೀ. ಅಂತರದಲ್ಲಿ ಇದ್ದುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ: 15/12/2016ರ ಆದೇಶದ ರೀತ್ಯಾ 2016–17ನೇ ಸಾಲಿನ ಉಳಿದ ಅವಧಿಗೆ ಕುಂದಾಪುರ ಕಸಬಾ ವ್ಯಾಪ್ತಿಯ ಕಸಬಾ ಗ್ರಾಮದ ಕ.ಸಂ: 392, 392/1 ರಲ್ಲಿಗೆ ಸ್ಥಳಾಂತರಿಸಲು ಈ ಕಛೇರಿ ಆದೇಶ ದಿನಾಂಕ: 30/06/2017 ರಲ್ಲಿ ಅನುಮತಿ ನೀಡಲಾಗಿರುತ್ತದೆ. ಸದರಿ ಸನ್ನದನ್ನು ಸ್ಥಳಾಂತರಿಸುವ ಪೂರ್ವದಲ್ಲಿ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಾವಳಿಗಳು 1967ರ ನಿಯಮ 5(3) ರಡಿ ಪರಿಶೀಲಿಸಲಾಗಿರುತ್ತದೆ. ಸದರಿ ಸನ್ನದು ಸ್ಥಳಾಂತರ ಕೋರಿದ ಕಟ್ಟಡದ 100 ಮೀ. ವ್ಯಾಪ್ತಿಯಲ್ಲಿ ಬರುವ ಸಾಯಿ ಮಂದಿರ, ನಾಗಜಟ್ಟಿಗೇಶ್ವರ ದೇವಸ್ಥಾನವು ಕುಂದಾಪುರ ತಾಲ್ಲೂಕಿನ ಅಧಿಸೂಚಿತ ಸಂಸ್ಥೆಯ ಪಟ್ಟಿಯಲ್ಲಿ ನಮೂದಾಗಿರುವುದಿಲ್ಲ ಎಂಬುದಾಗಿ ಸಹಾಯಕ ಆಯುಕ್ತರು (ಪ್ರಭಾರ), ಹಿಂದೂ ಧಾರ್ಮಿಕ ಸಂಸ್ಥೆಗಳು ಧರ್ಮಾದಾಯ ದತ್ತಿ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ ರವರು ಹಿಂಬರಹವನ್ನು ನೀಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

7. ಪಿರ್ಯಾದುದಾರರ ಪ್ರತ್ಯುತ್ತರ:-

ಸ್ಥಳ ತನಿಖೆ ನಡೆಸುವಾಗ ಸೂಕ್ತವಾದ "ಸುಚನಾ ಅವಧಿ" ಯನ್ನು ಮುಖ್ಯಾಧಿಕಾರಿಯು ನೀಡಿರುವುದಿಲ್ಲ. ಮಂದಿರ ಶಾಲೆ ಇವುಗಳ ವಾಸ್ತವಿಕ ದೂರವೆಷ್ಟೆಂಬುದನ್ನು ಸ್ಥಳ ತನಿಖೆ ಮಾಡಿ ಅರಿಯುವುದೇ ಆಗಿದ್ದಲ್ಲಿ, ಸ್ಥಳ ತನಿಖೆಯ ಅಗತ್ಯವೇ ಇಲ್ಲ. ಸ್ಥಳದ "Google Map" ನಿಂದ ವಸ್ತುಸ್ಥಿತಿಯ ಸತ್ಯ ಹೊರಗೆ ಬರುತ್ತದೆ. "Google Map" ಅನ್ನು ಲಗತ್ತಿಸಿರುತ್ತೇನೆ. 50 ಮೀ. ತ್ರಿಜ್ಯದ ವೃತ್ತದ ವಿಸ್ತೀರ್ಣದೊಳಗೆ ಮಂದಿರ ಮತ್ತು ಶಾಲೆಗಳು ಇರುತ್ತವೆ. ಈ ವಿಚಾರದ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದು ವಿಚಾರಣೆ ಹಂತದಲ್ಲಿರುತ್ತದೆ ಎಂದು ನಮೂದಿಸಿರುತ್ತಾರೆ.

8. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಕಂದಾಯ ನಿರೀಕ್ಷಕರು ತಮ್ಮ ವರದಿಯಲ್ಲಿ ಪ್ರಶ್ನಿತ ಕಟ್ಟಡವು 100 ಮೀಟರ್ ಕಾಲುದಾರಿಯ ಅಂತರ ಮೀರಿ ಶಾಲೆ, ನಾಗಬನ, ಸಾಯಿಮಂದಿರ, ಮಠ, ಚರ್ಚ್ ಇರುವುದಾಗಿ ಸ್ಥಳದಲ್ಲಿ ಅಳತೆ ಮಾಡಿ ಅಂತರದ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಸದರಿ ಸ್ಥಳ ಪರಿಶೀಲನಾ ಅವಧಿಯಲ್ಲಿ ಪಿರ್ಯಾದುದಾರರಿಗೆ ನೋಟೀಸು ನೀಡಿದ್ದರೂ ತನಿಖೆಗೆ ಪಿರ್ಯಾದುದಾರರು ಹಾಜರಿರುವುದಿಲ್ಲವೆಂದು ನಮೂದಿಸಿರುತ್ತಾರೆ.

9. ಪಿರ್ಯಾದುದಾರರು ತಮ್ಮ ಪ್ರತ್ಯುತ್ತರದಲ್ಲಿ ನಿಯಮಗಳ ಪ್ರಕಾರ ಸ್ಥಳ ಮಹಜರ್ ವೇಳೆ ಹಾಜರಾಗಲು ಕಾಲಾವಕಾಶವನ್ನು ಪಿರ್ಯಾದುದಾರರಿಗೆ ನೀಡಿಲ್ಲವೆಂದು ಪಿರ್ಯಾದುದಾರರ ಅನುಪಸ್ಥಿತಿಯಲ್ಲಿ ಅಳತೆ ಕಾರ್ಯವನ್ನು ನಡೆಸಿರುವುದಾಗಿ ಆಕ್ಷೇಪಿಸಿರುತ್ತಾರೆ. ಪಿರ್ಯಾದುದಾರರು ಸ್ಥಳದ Google Map ಲಗತ್ತಿಸಿದ್ದು ಸದರಿ ನಕ್ಷೆಯಲ್ಲಿ ಕಾಲ್ನಡಿಗೆಯ ದೂರ ನಮೂದಿಸಿರುವುದಿಲ್ಲ. ಸ್ಥಳ ತನಿಖೆ ಮಾಡಿ ಖುದ್ದು

ವೀಕ್ಷಿಸಿ ವರದಿ ಸಲ್ಲಿಸಲು ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ರವರಿಗೆ ಆದೇಶಿಸಲಾಗಿರುತ್ತದೆ.

10. PI, ಕರ್ನಾಟಕ ಲೋಕಾಯುಕ್ತ, ಉಡುಪಿ ರವರು ಸಲ್ಲಿಸಿರುವ ತನಿಖಾ ವರದಿ:-

ದಿನಾಂಕ: 30/05/2019 ರಂದು ಸ್ಥಳ ತನಿಖೆಗೆ ಕುಂದಾಪುರ ಪುರಸಭೆಯ ಮುಖ್ಯಾಧಿಕಾರಿ, ಕಂದಾಯ ಅಧಿಕಾರಿ ಇವರುಗಳು ಹಾಜರಿರುತ್ತಾರೆ. ಕುಂದಾಪುರ ಪುರಸಭಾ ವ್ಯಾಪ್ತಿಯ 2ನೇ ವಾರ್ಡಿನ ಕಟ್ಟಡ ಸಂಖ್ಯೆ 2 ರ 392, 392/1 ರಲ್ಲಿ ವಾಣಿಜ್ಯ ಸಂಕೀರ್ಣ ಇದ್ದು ಇದರಲ್ಲಿ ಚೌಟಾಸ್ ವೈನ್ಸ್ ಕಟ್ಟಡ ಹಾಗೂ ಸಂಕೀರ್ಣಕ್ಕೆ ಸುತ್ತಲೂ ಕಾಂಪೌಂಡ್ ಮಾಡಿದ್ದು ಕಂಡು ಬಂದಿರುತ್ತದೆ. ಸದ್ರಿ ವೈನ್ಸ್ ಶಾಪಿನ ಉತ್ತರ-ಪಶ್ಚಿಮಕ್ಕೆ ಅರ್ಜಿದಾರರಾದ ಶ್ರೀ ರಮೇಶ್ ಶೇಟ್ ಇವರ ಮನೆ ಹಾಗೂ ಎದುರುಗಡೆ ಖಾಲಿ ಸ್ಥಳ ಇರುತ್ತದೆ. ಸದ್ರಿ ವೈನ್ ಶಾಪ್‌ಗೆ ಎದುರಿನಿಂದ ರಸ್ತೆ ಇದ್ದು ಗೇಟ್ ಇರುವುದಿಲ್ಲ. ವಾಣಿಜ್ಯ ಸಂಕೀರ್ಣ ಮತ್ತು ಇದರ ಉತ್ತರ ದಿಕ್ಕಿನ ಕಾಂಪೌಂಡ್ ಮಧ್ಯೆ ಜನರಿಗೆ ಓಡಾಡಲು ಪ್ಯಾಸೇಜ್ ಇರುವುದು ಕಂಡು ಬರುತ್ತದೆ. ವಾಣಿಜ್ಯ ಕಟ್ಟಡದಿಂದ ಸುಮಾರು 52 ಮೀ ವರೆಗೆ ಪೂರ್ವ-ಪಶ್ಚಿಮವಾಗಿ ಕಾಂಪೌಂಡ್ ಗೋಡೆ ಇದ್ದು ಕಾಂಪೌಂಡ್ ಕೊನೆಯಲ್ಲಿ ಹೊರಗಡೆ ಹೋಗಲು ದೊಡ್ಡಗೇಟ್ ಇರುತ್ತದೆ. ಸದ್ರಿ ವೈನ್ ಶಾಪ್ ಇರುವ ಸ್ಥಳದಿಂದ ವಾಣಿಜ್ಯ ಸಂಕೀರ್ಣದ ಹಿಂಭಾಗದ ಗೇಟ್ ಮೂಲಕ ಅಳತೆ ಮಾಡಿದ್ದು ರಾಘವೇಂದ್ರ ಭಜನಾ ಮಂದಿರಕ್ಕೆ ಕಾಲ್ನಡಿಗೆ ದೂರ 94 ಮೀಟರ್, ನಾಗಬನಕ್ಕೆ 104 ಮೀ ಮತ್ತು ಸಾಯಿ ಮಂದಿರಕ್ಕೆ 113 ಮೀಟರ್ ದೂರವಿರುತ್ತದೆ. ಚರ್ಚ್ ಗೇಟಿಗೆ ಹಾಗೂ ಯು.ಬಿ.ಎಂ.ಸಿ ಶಾಲೆ ಗೇಟಿಗೆ ಇರುವ ಕಾಲ್ನಡಿಗೆ ದೂರವನ್ನು ಅಳತೆ ಮಾಡಲಾಗಿದ್ದು ಕ್ರಮವಾಗಿ 153 ಮೀಟರ್ ಹಾಗೂ 168 ಮೀಟರ್ ಇರುವುದು ಕಂಡು ಬಂದಿರುತ್ತದೆ ಎಂದು ದಾಖಲೆಗಳ ಸಹಿತ ವರದಿ ಸಲ್ಲಿಸಿರುತ್ತಾರೆ.

11. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್ (ಹೆ.ಪ್ರ) ಉಡುಪಿ ಜಿಲ್ಲೆ ಇವರು ಸಿ.ಎಲ್-2 ಸನ್ನದನ್ನು

ಸ್ಥಳಾಂತರಿಸುವ ಬಗ್ಗೆ ದಿನಾಂಕ: 30/06/2017 ರಂದು ಆದೇಶಿಸಿದ್ದು ಸದರಿ ಆದೇಶದಲ್ಲಿ ಶ್ರೀ ಅಜಿತ್ ಚೌಟಾಲ ರವರು 2016–17ನೇ ಸಾಲಿನಲ್ಲಿ ಹೊಂದಿರುವ ಸಿ.ಎಲ್–2 ಸನ್ನದನ್ನು 2016–17ನೇ ಸಾಲಿನ ಉಳಿದ ಅವಧಿಗೆ ವಿಧಿಸಿರುವ ಷರತ್ತಿನಂತೆ ಕುಂದಾಪುರ ಪುರಸಭಾ ವ್ಯಾಪ್ತಿಯ ಕಸಬಾ ಗ್ರಾಮದ ಕ.ಸಂ.392, 392/1 ರಲ್ಲಿಗೆ ಸ್ಥಳಾಂತರಿಸಲು ಅನುಮತಿ ನೀಡಿ ಆದೇಶಿಸಿರುತ್ತಾರೆ.

ಅಜಿತ್ ಚೌಟಾ ಎನ್ನುವವರು ಸಂಖ್ಯೆ: 392, 392/1ರ ಕಟ್ಟಡದಲ್ಲಿ ವೈನ್‌ಷಾಪ್ ನಡೆಸಲು ಪಿರ್ಯಾದುದಾರರು ಆಕ್ಷೇಪಿಸಿದ್ದು ಕಟ್ಟಡದ ಸುತ್ತ ವಾಸೋಪಯೋಗಿ ಕಟ್ಟಡಗಳು, ಕಟ್ಟಡದ ಹತ್ತಿರ South India Church ಇರುವುದನ್ನು ಪರಿಗಣಿಸದೆ ನಿಯಮ ಬಾಹಿರವಾಗಿ 1ನೇ ಎದುರುದಾರರು ಎನ್.ಓ.ಸಿ., ನೀಡಿದ್ದಾರೆಂದು ದೂರಿನಲ್ಲಿ ಆರೋಪಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಕುಂದಾಪುರ, ಇವರು ದಿನಾಂಕ: 22/06/2017 ರಂದು ಪಂಚರ ಸಮಕ್ಷಮ ಸ್ಥಳ ಮಹಜರ್ ಜರುಗಿಸಿದ್ದು ಸದರಿ ಮಹಜರ್‌ನಲ್ಲಿ ಕಟ್ಟಡವು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ನಿಯಮ) 1967ರ ರೂಲ್ಸ್ 5ರ ಪ್ರಕಾರ ಆಕ್ಷೇಪಣ ರಹಿತ ಸ್ಥಳವಾಗಿರುತ್ತದೆ ಹಾಗೂ ನಿಯಮ 5(3)ರ ಅನುಗುಣವಾಗಿ ಅಳತೆ ಮಾಡಲಾಗಿದೆ ಎಂದು ನಮೂದಿಸಿರುತ್ತಾರೆ.

12. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ನಿಯಮ) 1967ರ ರೂಲ್ಸ್ 5ರ ಪ್ರಕಾರ ಯಾವುದೇ ಧಾರ್ಮಿಕ ಅಥವಾ ಶೈಕ್ಷಣಿಕ ಸಂಸ್ಥೆ ಅಥವಾ ಆಸ್ಪತ್ರೆ ಅಥವಾ ರಾಜ್ಯ ಸರ್ಕಾರಿ ಕಛೇರಿ ಅಥವಾ ಕೇಂದ್ರ ಸರ್ಕಾರಿ ಕಛೇರಿ ಅಥವಾ ಎಸ್.ಸಿ., ಎಸ್.ಟಿ., ಸಮುದಾಯದವರು ವಾಸಿಸುವ ಬಡಾವಣೆಗಳಿಗೆ 100 ಮೀಟರ್ ಅಂತರದಲ್ಲಿ ಮದ್ಯದ ಅಂಗಡಿಗೆ ಪರವಾನಗಿ ನೀಡಬಾರದೆಂದು ನಿಯಮ ರೂಪಿಸಲಾಗಿರುತ್ತದೆ. ಸದರಿ ನಿಯಮ 5(3)(3)ರ ರೀತ್ಯಾ ಸದರಿ ಅಂತರವನ್ನು ಹತ್ತಿರದ ಕಾಲು ದಾರಿಯಿಂದ ಅಳೆಯಬೇಕೆಂದು ನಿಯಮ ರೂಪಿಸಲಾಗಿರುತ್ತದೆ.

13. PI, ಕರ್ನಾಟಕ ಲೋಕಾಯುಕ್ತ, ಉಡುಪಿ ರವರು ದಿನಾಂಕ: 30/05/2019 ರಂದು ಸ್ಥಳ ತನಿಖೆ ನಡೆಸಿರುತ್ತಾರೆ. ವೈನ್ ಶಾಪ್ ಇರುವ ಸ್ಥಳದಿಂದ ವಾಣಿಜ್ಯ ಸಂಕೀರ್ಣದ ಹಿಂಭಾಗದ ಗೇಟ್ ಮೂಲಕ ಅಳತೆ ಮಾಡಿದ್ದು ರಾಘವೇಂದ್ರ ಭಜನಾ ಮಂದಿರಕ್ಕೆ ಕಾಲ್ನಡಿಗೆ ದೂರ 94 ಮೀಟರ್, ನಾಗಬನಕ್ಕೆ 104 ಮೀ ಮತ್ತು ಸಾಯಿ ಮಂದಿರಕ್ಕೆ 113 ಮೀಟರ್ ದೂರವಿರುತ್ತದೆ. ಚರ್ಚ್ ಗೇಟಿಗೆ ಹಾಗೂ ಯು.ಬಿ.ಎಂ.ಸಿ ಶಾಲೆ ಗೇಟಿಗೆ ಇರುವ ಕಾಲ್ನಡಿಗೆ ದೂರವನ್ನು ಅಳತೆ ಮಾಡಲಾಗಿದ್ದು ಕ್ರಮವಾಗಿ 153 ಮೀಟರ್ ಹಾಗೂ 168 ಮೀಟರ್ ಇರುವುದು ಕಂಡು ಬಂದಿರುತ್ತದೆ ಎಂದು ದಾಖಲೆಗಳ ಸಹಿತ ವರದಿ ಸಲ್ಲಿಸಿರುತ್ತಾರೆ.

14. PI ರವರು ಪುರಸಭೆ ಮುಖ್ಯಾಧಿಕಾರಿ ಮತ್ತು ಕಂದಾಯ ಅಧಿಕಾರಿಗಳ ಸಮಕ್ಷಮ ಸ್ಥಳ ತನಿಖೆ ನಡೆಸಿದ್ದು ವೈನ್ ಶಾಪ್ ಇರುವ ಸ್ಥಳದಿಂದ ರಾಘವೇಂದ್ರ ಭಜನಾ ಮಂದಿರಕ್ಕೆ ಕಾಲ್ನಡಿಗೆ ದೂರ 94 ಮೀಟರ್ ಇರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ನಿಯಮ) 1967 ರೂಲ್ಸ್ 5 ರ ಪ್ರಕಾರ ಯಾವುದೇ ಧಾರ್ಮಿಕ ಸಂಸ್ಥೆಯು 100 ಮೀಟರ್ ಅಂತರದಲ್ಲಿ ಇದ್ದಾಗ ಮಧ್ಯದ ಅಂಗಡಿ ಪರವಾನಗಿಯನ್ನು ನೀಡಬಾರದೆಂದು ನಿಯಮ ರೂಪಿಸಲಾಗಿರುತ್ತದೆ. ಸದರಿ ನಿಯಮವನ್ನು ಉಲ್ಲಂಘಿಸಿ ವೈನ್ ಶಾಪ್ ನಡೆಸಲು ನಿರಾಕ್ಷೇಪಣಾ ಪತ್ರವನ್ನು 1ನೇ ಎದುರುದಾರರು ದಿನಾಂಕ: 06/06/2017 ರಂದು ನೀಡಿರುವುದು ಕಂಡುಬಂದಿರುತ್ತದೆ.

15. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, CLZ ಸನ್ನದನ್ನು ಸ್ಥಳಾಂತರಿಸಿ ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂ. 392, 392/1 ರಲ್ಲಿ ಶ್ರೀ ಅಜಿತ್ ಚೌಟಾಲ ಇವರಿಗೆ ವೈನ್ ಷಾಪ್ ನಡೆಸಲು ನಿಯಮಬಾಹಿರವಾಗಿ ಅನುಮತಿ ನೀಡಿದ್ದು ಉದ್ದೇಶಿತ ಸ್ಥಳಾಂತರವು ಆಕ್ಷೇಪಣಾ ಸ್ಥಳದಿಂದ ಮುಕ್ತವಾಗಿರದೆ ಸಾರ್ವಜನಿಕ ಭಜನಾ ಮಂದಿರವು ಹತ್ತಿರದಲ್ಲಿದ್ದು ಸದರಿ ಕಟ್ಟಡದಿಂದ CLZ ಸನ್ನದನ್ನು ನಿಯಮಾನುಸಾರ ಸ್ಥಳಾಂತರಿಸಲು ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು

ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

16. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**